# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು</u>

**ಸಿ ಸಿ ನಂ:1383/2023**

**ಚಾಸಾ-4/ಪ್ರಾಸಾ-1**

**ಪ್ರಮಾಣ ವಚನ ಭೋಧಿಸಲಾಯಿತು.** **<u>ದಿನಾಂಕ:26.12.2024</u>**

ಹೆಸರು : ರಂಜಾನ್ ಸಾಬ್ ತಂದೆ ಹೊನ್ನೂರ್ ಸಾಬ್

ವಯಸ್ಸು : **54** ವರ್ಷ

ಉದ್ಯೋಗ : ಖಾಸಗಿ ಬಸ್ ಕಂಡಕ್ಟರ್

ವಿಳಾಸ : ಮರೇನಹಳ್ಳಿ ಗ್ರಾಮ, ಜಗಳೂರು ತಾಲೂಕು

**<u>ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:</u>**

ನಾನು ಒಂದು ವರ್ಷದ ಹಿಂದೆ ಜಗಳೂರು ಪೋಲೀಸ್ ಠಾಣೆಗೆ ಹೋದಾಗ ಪೋಲಿಸರು ನನ್ನನ್ನು ಕರೆದು ಸಹಿ ಮಾಡು ಎಂದು ಹೇಳಿರುತ್ತಾರೆ, ನಾನು ಸಹಿ ಮಾಡಿರುತ್ತೇನೆ. ಈಗ ನೋಡುತ್ತಿರುವ ಜಪ್ತಿ ಪಂಚನಾಮೆಯಲ್ಲಿ ಇರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿ ನೋಡಿ ಗುರುತಿಸಿದ ಜಪ್ತಿ ಪಂಚನಾಮೆ ಅದು ನಿ.ಪಿ.**1** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**1**(ಎ) ಎಂದು ಗುರುತಿಸಲಾಯಿತು. ಯಾವ ವಿಚಾರವಾಗಿ ಪೋಲಿಸರು ಸಹಿ ಮಾಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ಚಾಸಾ-**5** ರವರು ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ಪೋಲಿಸರು ಏನು ಮಾಡಿದರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ.

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಸೂಕ್ತ ಕಾರಣಗಳನ್ನು ನೀಡಿದ ಮೇರೆಗೆ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು).

**<u>ಪಾಟೀ ಸವಾಲುಃ</u> ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ದಿಃ**06.08.2023** ರಂದು ನಾನು ಮತ್ತು ಚಾಸಾ-**5** ರವರನ್ನು ಪೋಲಿಸರು ನೋಟೀಸು ಮೂಲಕ ಕರೆಯಿಸಿ ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು ಸಂಜೆ **05.00** ರಿಂದ **06.00** ಗಂಟೆಯವರೆಗೆ ಜಪ್ತಿ ಪಂಚನಾಮೆ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಕೃತ್ಯಕ್ಕೆ ಬಳಸಿದ ಒಂದು ಕುರ್ಜಿಯನ್ನು ಹಾಜರುಪಡಿಸಿ ಚಾಸಾ**1** ರವರ ಮನೆಯಲ್ಲಿ ಕಳ್ಳತನ ಮಾಡಿರುವ ಬಗ್ಗೆ ಒಪ್ಪಿಕೊಂಡು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕಡತದಲ್ಲಿರುವ 02 ಪೋಟೋಗಳನ್ನು ತೋರಿಸಿದ್ದು, ಸಾಕ್ಷಿ ತಾನು ಇದ್ದುದ್ದನ್ನು ಗುರುತಿಸಿದ್ದು ಅವುಗಳನ್ನು ನಿಪಿ2 ಮತ್ತು 3 ಎಂದು ಗುರುತಿಸಲಾಯಿತು. ಈ ವಿಚಾರವಾಗಿ ನಿಪಿ**2** ಮತ್ತು ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ**06.08.2023** ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನ್ಯಾಯಾಲಯದ ಕಡತದಿಂದ ಪೋಲಿಸರಿಗೆ ನೀಡಿದ ಹೇಳಿಕೆಯನ್ನು ತೋರಿಸಲಾಗಿ ಅದನು ನಿರಾಕರಿಸಿದ್ದು, ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ4 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ-ಆರೋಪಿ ಪರ ವಕೀಲರಿಂದಃ</u>** ಇರುವುದಿಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**ಸಹಿ**

**ಪ್ರ.ದ.ನ್ಯಾ.ದಂ., ಜಗಳೂರು**